# ಆಳ್ವಾಸ್ ಆರೋಗ್ಯ ಧಾಮ

ಸಾಲು–ಸಾಲು ಕಾಟೇಜ್



ಎಣ್ಣೆ ಮಸಾಜ್

■ ಚಿತ್ರ – ಬರಹ:
**ನಿತ್ಯಾನಂದ ಬಿ ಶೆಟ್ಟಿ**

**ಡಾ.** ಮೋಹನ್ ಆಳ್ವರು ಗತಿಸಿದ ತಮ್ಮ ಮಡದಿ ಶೋಭಾ ಆಳ್ವರ ಸ್ಮೃತಿಗಾಗಿ ಮೂಡುಬಿದಿರೆಯ ಮಿಜಾರಿನಲ್ಲಿ ಬೆಳೆಸಿದ ಶೋಭಾವನ ಎಂಬ ಅನುಪಮವಾದ ಔಷಧೀಯ ವನ ನಿರ್ಮಿಸಿದ್ದಾರೆ. ಅಲ್ಲೇ ಇದೆ ಆಳ್ವಾಸ್ ಆನಂದಮಯ ಆರೋಗ್ಯಧಾಮ. ಈ ಆರೋಗ್ಯಧಾಮದಲ್ಲಿ ಸುಮಾರು 25 ಕಾಟೇಜ್‌ಗಳನ್ನು ನಿರ್ಮಿಸಿದ್ದಾರೆ.

ನೀವು ಏನು ತಿನ್ನ ಬೇಕು.. ಏನು ತಿನ್ನ ಬಾರದು.. ಏನು ಕುಡೀಬೇಕು.. ಏನು ಕುಡೀಬಾರದು ಎನ್ನುವುದನ್ನು ನಿರ್ಧರಿಸುವ ಈರ್ವರು ವೈದ್ಯರು ಅಲ್ಲಿದ್ದಾರೆ. ಅವರಲ್ಲೂ ಒಬ್ಬರು ಆಯುರ್ವೇದಿಕ್, ಇನ್ನೊಬ್ಬರು ನ್ಯಾಚುರೋಪತಿ.

ನೀವು ಉಳಿಯುವ ಅಷ್ಟೂ ದಿನಗಳಲ್ಲಿ ನಿಮಗೆ ಯೋಗಾಭ್ಯಾಸ ಮಾಡಿಸುವ ಯೋಗಗುರುಗಳಿದ್ದಾರೆ. ಮಸಾಜ್ ಪ್ರವೀಣರಿದ್ದಾರೆ. ಆಯುರ್ವೇದ, ನ್ಯಾಚುರೋಪತಿ ಮತ್ತು ಫಿಸಿಯೋಥೆರಪಿ ಇವು ಮೂರನ್ನು ಬೆಸೆದ, ಔಷಧೀಯ ವನಸಮೂಹದ ನಡುವೆ ಇರುವ  ರಾಜ್ಯದ ಏಕೈಕ ಆರೋಗ್ಯಧಾಮವೆಂದರೆ ಅದು ಆಳ್ವಾಸ್ ಆನಂದಮಯ ಆರೋಗ್ಯಧಾಮ ಮಾತ್ರ.

ನೀವು ಉಳಿಯುವ ಒಂದೊಂದು ಮನೆಯೂ ಇಲ್ಲಿ ಒಂದೊಂದು ಸ್ವತಂತ್ರ ಕಲಾಕೃತಿಯೇ ಆಗಿದೆ. ಸುಮಾರು 30 ಲಕ್ಷದಷ್ಟು ವೆಚ್ಚ ಬಿದ್ದಿರುವ ಇಲ್ಲಿಯ ಕುಟೀರಗಳು ಯಾವುದೇ ಪಂಚತಾರಾ ಹೋಟೆಲ್‌ನ ಸೌಲಭ್ಯಕ್ಕೂ ಕಡಿಮೆಯಿಲ್ಲ. ಮನೆಯ ನಡುವೆ ಮಳೆ ನೀರು ಬೀಳುವ ತೊಟ್ಟಿಮನೆಗಳೂ ಇಲ್ಲಿವೆ. ಹಾಗೆಯೇ ಮಾಡಿನ ನಾಲ್ಕೂ ಮೂಲೆಗಳಿಂದ ಹರಿದು ಬಂದ ನೀರು  ನೇರವಾಗಿ ವರಾಂಡದಲ್ಲೇ ಬೀಳುವಂತೆ, ಮಳೆನೀರು ನೇರವಾಗಿ ಬಾತ್‌ರೂಮ್‌ನಲ್ಲಿ ಸುರಿಯುವಂತೆಯೂ ಇಲ್ಲಿಯ ಮನೆಗಳ ವಾಸ್ತುವನ್ನು ಡಾ. ಆಳ್ವ ರೂಪಿಸಿದ್ದಾರೆ.

ಎತ್ತಿನ ಬಂಡಿಯ ಚಕ್ರವನ್ನು ಸಮನಾಗಿ ಕೊಯ್ದು  ನಾಲ್ಕು ಭಾಗಗಳನ್ನಾಗಿ ಮಾಡಿ ಅದರಿಂದಲೇ ತಯಾರಾದ ಕುರ್ಚಿಗಳು, ಭತ್ತ ತುಂಬಿಸುವ ಕಳಸಿಗೆಯನ್ನು ಕುಯ್ದು ರೂಪಿಸಿದ ಟೀಪಾಯ್‌ಗಳು, ಹುಳು ತಿಂದ ಮರದ ಬೊಡ್ಡೆಯಿಂದ ಮಾಡಿದ ಪೀಠೋಪಕರಣಗಳು, ಬಿದಿರಿನ ತೂಗುಯ್ಯಾಲೆಗಳು ನಿಮ್ಮನ್ನು ಕ್ಷಣಮಾತ್ರದಲ್ಲಿ ಆವರಿಸಿಕೊಳ್ಳುತ್ತವೆ. ಕೂರುವುದೋ, ಜೀಕುವುದೋ, ಮಲಗುವುದೋ, ನಡೆಯುವುದೋ ಎಂಬ ಗೊಂದಲವೇ ನಿಮ್ಮನ್ನು ಸಾಕಷ್ಟು ಹೊತ್ತು ಕಾಡುತ್ತದೆ.

ಶೋಭಾವನದ ಶಿಖರ ಭಾಗದಲ್ಲಿ ತೈಲ ಮಜ್ಜನ, ಮಡ್ ಬಾತ್, ಜಲ ಚಿಕಿತ್ಸೆ, ಹಬೆ ಸ್ನಾನ, ಸೂಜಿ ಚಿಕಿತ್ಸೆ ( ಆಕ್ಯುಪಂಕ್ಚರ್), ಪಂಚಕರ್ಮ ಚಿಕಿತ್ಸೆ, ಮ್ಯಾಗ್ನೆಟ್ ಥೆರಪಿ, ಫಿಸಿಯೋಥೆರಪಿ ಇತ್ಯಾದಿಗಳನ್ನು ಒಳಗೊಂಡ ಅಪೂರ್ವ ವಾಸ್ತು ವಿನ್ಯಾಸದ ಚಿಕಿತ್ಸಾ ಕೇಂದ್ರವೇ ನುರಿತ ತಜ್ಞರಿಂದ ಸಜ್ಜುಗೊಂಡಿದೆ. ನಮ್ಮಲ್ಲಿರುವ ಯಾವುದೇ ಈ ಬಗೆಯ ಹೆಲ್ತ್ ರೆಸಾರ್ಟ್‌ಗಳು ಬಹಳ ಬಾರಿ ಸಮಾಜದ ಇಲೈಟ್ ಕ್ಲಾಸ್ ಅನ್ನು (ಶ್ರೀಮಂತ ವರ್ಗ) ಗಮನದಲ್ಲಿ ಇಟ್ಟುಕೊಂಡು ದುಡ್ಡು ಸುಲಿಯುವ ತಾಣಗಳಾಗಿದ್ದರೆ, ಆಳ್ವರು ಮಾತ್ರ ಇದನ್ನೊಂದು ಸಮಾಜದ ಸಮಸ್ತ ಜನರನ್ನೂ ಗಮನದಲ್ಲಿ ಇಟ್ಟುಕೊಂಡು ಅತ್ಯಂತ ಕಡಿಮೆ ಶುಲ್ಕವನ್ನು ಜನರಿಂದ ತೆಗೆದುಕೊಳ್ಳುತ್ತಿದ್ದಾರೆ.

ಮಳೆಗಾಲ ಮತ್ತು ಚಳಿಗಾಲದ ಬೆಳಗು ಆವರಿಸುವ  ಮತ್ತು ಸಂಜೆ ಕವಿಯುವ ಹೊತ್ತಲ್ಲಂತೂ ಮಿಜಾರಿನ ಶೋಭಾವನ ಬೇರೆಯಲ್ಲ ಡಾರ್ಜಿಲಿಂಗ್‌ನ ಗಿರಿಶ್ರೇಣಿಗಳು ಕೊಡುವ ಆಹ್ಲಾದ ಬೇರೆಯಲ್ಲ ಎಂದು ಅನ್ನಿಸಿಬಿಡುತ್ತದೆ. ಪೇಟೆಯ ಜಂಜಾಟದಿಂದ ಬಿಡುಗಡೆ ಬಯಸುವವರಿಗೆ, ವಾರಾಂತ್ಯದ ವಿರಾಮಕ್ಕಾಗಿ ಹಂಬಲಿಸುವವರಿಗೆ ಎಲ್ಲ ಅರ್ಥದಲ್ಲೂ ಇದೊಂದು ಸ್ವರ್ಗ ಸದೃಶ ವಾಸ ಸ್ಥಳ.
(ಹೆಚ್ಚಿನ ಮಾಹಿತಿಗೆ : 08258–202386, 9480358325)